ಇ) ಸರ್ಕಾರದಿಂದ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವಾಗ ಈ ಭಾಗದ ಜಿಲ್ಲೆಯಲ್ಲಿ ನಡೆಯುತ್ತಿರವ ತಾರತಮ್ಯವು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಮುಂದೆ ತೆಗೆದುಕೊಳ್ಳಬಹುದಾದ ಕ್ರಮಗಳೇನು?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 782 ಸರ್ಕಾರಿ ಪ್ರೌಢಶಾಲೆಗಳು ಬರುತ್ತವೆ.

ಆ) 2002–2003ನೇ ಸಾಲಿಗೆ 16 ಹಾಗೂ 2003–04ನೇ ಸಾಲಿಗೆ 23 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿದ್ದು, ಒಟ್ಟು ಶಿಕ್ಷಕರ ಸಂಖ್ಯೆ 78 ತಕ್ಷಣಕ್ಕೆ ನಿಯೋಜನೆ ಮೇಲೆ ಅಥವಾ ಮರು ಹಂಚಿಕೆ ಮೂಲಕ ಭರ್ತಿ ಮಾಡಿ ನಂತರ ಇಲಾಖಾ ನೇಮಕಾತಿ ನಿಯಮಾನುಸಾರ ನೇರನೇಮಕಾತಿ ಮಾಡಿ ಭರ್ತಿ ಮಾಡಲಾಗುವುದು.

ಇ) 1. ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಶೈಕ್ಷಣಿಕವಾಗಿ ಹಿಂದುಳಿದ ಏಳು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಅಭಿವೃದ್ಧಿಗಾಗಿ ಗುಲ್ಬರ್ಗ ನಗರದಲ್ಲಿ ಈಶಾನ್ಯ ವಲಯ ಶೈಕ್ಷಣಿಕ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ.

2. ಮಕ್ಕಳ ಹಾಜರಾತಿ ಮತ್ತು ದಾಖಲಾತಿ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ವಾರ್ಷಿಕ ರೂ. 45,000 ಕೋಟಿ ಆಯವ್ಯಯದೊಂದಿದೆ 8754 ಪ್ರಾಥಮಿಕ ಶಾಲೆಗಳಲ್ಲಿ 16.14 ಲಕ್ಷ ಮಕ್ಕಳಿಗೆ ಅನುಕೂಲವಾಗುವಂತೆ ಬಿಸಿಯೂಟ ಯೋಜನೆಯನ್ನು ಕಳೆದ ಸಾಲಿನಿಂದಲೇ ಈ ವಲಯದಲ್ಲಿ ಜಾರಿಗೆ ತಂದಿದೆ.

3. ಕೇಳಿ ಕಲಿ ಬಾನುಲಿ ಕಾರ್ಯಕ್ರಮವನ್ನು ಧಾರವಾಡ–ಗುಲ್ಬರ್ಗ ಆಕಾಶವಾಣಿ ಕೇಂದ್ರಗಳಿಂದ 3,4, ಮತ್ತು 5ನೇ ತರಗತಿಯ ಮಕ್ಕಳಿಗಾಗಿ 2001–02ನೇ ಸಾಲಿನಿಂದ ನಡೆಸಲಾಗುತ್ತಿದೆ.

4. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ತರುವ ಸಲುವಾಗಿ ಚಿಣ್ಣರ ಅಂಗಳ ಕಾರ್ಯಕ್ರಮದಡಿಯಲ್ಲಿ 3 ಹಂತಗಳಲ್ಲಿ ಇದುವರೆಗೂ 1,17,687 ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಲಾಗಿದೆ.

5. ಅರ್ಜಿ ಪ್ರೇರಿತ ಪ್ರತಿಷ್ಠಾನದ ಸಹಯೋಗದೊಂದಿಗೆ 39,867 ಮಕ್ಕಳನ್ನು ಪರಿಹಾರ ಬೋದನ ಮತ್ತು 1919 ಮಕ್ಕಳಿಗೆ ವಿದ್ಯಾಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

6. 2002–03ನೇ ಸಾಲಿನಲ್ಲಿ 4963 ಪ್ರಾಥಮಿಕ ಶಾಲಾ ಶಿಕ್ಷಕರನ್ನು ಈ ವಲಯದಲ್ಲಿ ನೇಮಕ ಮಾಡಲಾಗಿದೆ.

ರಾಯಚೂರು ಜಿಲ್ಲೆಯಲ್ಲಿ ಸರ್ಕಾರಿ ಪಾಲಿಟಿಕ್ನಿಕ್ ಮಂಜೂರಾತಿ

3495 (4093) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪಾಲಿಟಿಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ:

ಆ) ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಲಿಂಗಸಗೂರು ಪಟ್ಟಣಕ್ಕೆ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ; ಯಾವಾಗ ಮಂಜೂರು ಮಾಡಲಾಗುವುದು;

ಇ) ಸದರಿ ಕಾಲೇಜನ್ನು ಮಂಜೂರು ಮಾಡುವ ಬೇಕಾಗುವ ಮೂಲಭೂತ ಸೌಲಭ್ಯಗಳೇನು ಹಾಗೂ ತಗಲಬಹುದಾದ ಒಟ್ಟು ವೆಚ್ಚವೆಷ್ಟು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ರಾಜ್ಯದ ವಿವಿಧ ಸ್ಥಳಗಳಲ್ಲಿ ಹೊಸದಾಗಿ 05 ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಹಾಗೂ 03 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಯಾವುದೇ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಮೊದಲು ಇದಕ್ಕೆಂದೇ ರಚಿಸಲಾದ ರಾಜ್ಯಮಟ್ಟದ ಸಮಿತಿಯ ಶಿಫಾರಸ್ಸಿನೊಂದಿಗೆ ನವದೆಹಲಿಯ ಎಐಸಿಟಿಇ ಯವರ ಅನುಮೋದನೆ ಅಗತ್ಯವಾಗಿರುತ್ತದೆ. ಪ್ರಸ್ತುತ ತಾಂತ್ರಿಕ ಶಿಕ್ಷಣ ಅಗತ್ಯವಿರುವ ರಾಜ್ಯದ ವಿವಿಧ 05 ಸ್ಥಳಗಳಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ 2000-01ನೇ ಸಾಲಿನ ಪ್ರಸ್ತಾವನೆಗೆ ಎಐಸಿಟಿಇ ನವದೆಹಲಿಯ ಅನುಮೋದನೆ ದೊರೆತಿದ್ದು ಸದರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಆಯವ್ಯಯದ ಕೊರತೆ ಇದೆ, ಆದ ಕಾರಣ ಹೊಸ ಪ್ರಸ್ತಾವನೆಯಾದ ಲಿಂಗಸಗೂರು ಪಟ್ಟಣದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವಿಕೆಯನ್ನು 2003-04ನೇ ಸಾಲಿಗೆ ತಿರಸ್ಕರಿಸಲಾಗುವುದು.

ಇ) ಎ.ಐ.ಸಿ.ಟಿ.ಇ ನಿಯಮಾವಳಿಗನುಸಾರವಾಗಿ ಲಿಂಗಸಗೂರಿನಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸಲು 20 ಎಕರೆ ಭೂಮಿ, ಪ್ರಾರಂಭಿಸಬಹುದಾದ ಕೋರ್ಸುಗಳು ಹಾಗೂ ಇವುಗಳ ಪ್ರವೇಶ ಸಂಖ್ಯೆಗನುಗುಣವಾಗಿ ಕಟ್ಟಡ, ಸೌಲಭ್ಯ, ಯಂತ್ರೋಪಕರಣಗಳು, ಪೀಠೋಪಕರಣಗಳು, ಗ್ರಂಥಾಲಯ ವ್ಯವಸ್ಥೆ ಹೆಚ್ಚುವರಿ ಬೋಧಕ : ಬೋಧಕೇತರ : ಆಡಳಿತಾತ್ಮಕ ಸಿಬ್ಬಂದಿ ಮುಂತಾದ ಮೂಲಭೂತ ಸೌಲಭ್ಯಗಳ ಅಗತ್ಯವಿದ್ದು ಸದರಿ ಸೌಕರ್ಯಗಳನ್ನು ಪೂರೈಸಿಕೊಂಡು ಸುಸಜ್ಜಿತ ಸರ್ಕಾರಿ ಪಾಲಿಟೆಕ್ನಿಕ್‌ನ್ನು ಸ್ಥಾಪಿಸಲು ಒಟ್ಟಾರೆ ಸುಮಾರು ರೂ. 8.00 ಕೋಟಿಗಳ ಅನಾವರ್ತ ಖರ್ಚು ಹಾಗೂ ಪ್ರತಿ ವರ್ಷ ಅಂದಾಜು ರೂ. 50.00 ಲಕ್ಷಗಳ ಆವರ್ತ ಖರ್ಚುಗಳ ಅಗತ್ಯವಿರುತ್ತದೆ. ಇದನ್ನು ಹಂತ ಹಂತವಾಗಿ ಮೂರು ವರ್ಷಗಳಲ್ಲಿ ಪೂರೈಸಿಕೊಳ್ಳಬೇಕಾಗುತ್ತದೆ.

ಹೈದ್ರಾಬಾದ್ – ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಶಾಲೆಗಳಲ್ಲಿ ಬೋಧಕ ಸಿಬ್ಬಂದಿ ಭರ್ತಿ ಮಾಡುವುದು

3496(4094) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೈದ್ರಾಬಾದ್-ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿನ ಒಟ್ಟು ಪ್ರಾಥಮಿಕ ಶಾಲೆಗಳು ಎಷ್ಟು;

ಆ) ಸದರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಸಕ್ತವಾಗಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದ್ದು, ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಬೇಕಾಗುವ ಬೋಧಕ ಸಿಬ್ಬಂದಿಯನ್ನು ಭರ್ತಿ ಮಾಡಲಾಗಿದೆಯೇ/ ಮಾಡದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು?